ದಿನಾಂಕ 03-09-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಎನ್.ಯು.ಹೆಚ್., ವಕೀಲರಿಂದಃ-

2. ನನ್ನ ತಂದೆ ರಾಮನಗರ ತಾಲ್ಲೂಕು ಬಡೆಸಾಬರದೊಡ್ಡಿಯಲ್ಲಿ ವಾಸವಿದ್ದರು. ನಾನು ವಿದ್ಯಾಭ್ಯಾಸ ಮಾಡಿಲ್ಲ. ನನ್ನ ದೊಡ್ಡ ಅಣ್ಣ ಸಿಮೆಂಟ್ ಕೆಲಸ ಮಾಡುತ್ತಾರೆ. ಅವರು ಎಷ್ಟು ವಿದ್ಯಾಭ್ಯಾಸ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ನಮ್ಮ ವಾದಪತ್ರದಲ್ಲಿ ಹೇಳಿರುವ ನಮ್ಮ ವಿಳಾಸ ನಮ್ಮ ಸ್ವಂತ ಮನೆಯ ವಿಳಾಸ. ಅದನ್ನು ನಮ್ಮ ತಂದೆ ಕೊಂಡುಕೊಂಡದ್ದು. ಅದನ್ನು 2003ರಲ್ಲಿ ಕೊಂಡುಕೊಂಡರು. 3ನೇ ಪ್ರತಿವಾದಿಯನ್ನು 2022ರಲ್ಲಿ ಪಾರ್ಟಿಯಾಗಿ ಮಾಡಿದ್ದು ಎಂದರೆ ಸರಿ. ಕೆ.ಐ.ಎ.ಡಿ.ಬಿ.,ಯಿಂದ ನೋಟಿಸ್ ಬಂದಾಗ ಕ್ರಯಪತ್ರದ ಬಗ್ಗೆ ನಮಗೆ ಗೊತ್ತಾದದ್ದು ಎಂದು ನಾನು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ತಂದೆ ನೋಂದಾಯಿತ ಜಿ.ಪಿ.ಎ. ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಅದು ನೋಂದಣಿಯಾಗಿದೆ ಎಂದರೆ ಸುಳ್ಳು. ನನ್ನ ತಂದೆ 2012ರಲ್ಲಿ ತೀರಿಕೊಂಡರು. 2012 ರಿಂದ 2020ರವರೆಗೆ ನಮ್ಮ ಹೆಸರಿಗೆ ಖಾತೆಯಾಗಿರಲಿಲ್ಲ.

3. ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದೇವೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಕೋರ್ಟ್ ಕೇಳಿಲ್ಲ, ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಬೆಲೆ ಜಾಸ್ತಿಯಾಗಿರುವುದರಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಸರ್ವೇ ನಂ.75/1, ವಿಸ್ತೀರ್ಣ 1 ಎಕರೆ, ಮತ್ತೊಂದು ಸರ್ವೇ ನಂ.34/2, ವಿಸ್ತೀರ್ಣ 23 ಗುಂಟೆ, ಸರ್ವೇ ನಂ.206, ವಿಸ್ತೀರ್ಣ ಗೊತ್ತಿಲ್ಲ, ಸರ್ವೇ ನಂ.206 ಅಲ್ಲ, ಸರ್ವೇ ನಂ.200/2 ಎಂದರೆ ಸರಿಯಲ್ಲ. ಮತ್ತೊಂದು ಸರ್ವೇ ನಂ.282, ವಿಸ್ತೀರ್ಣ ನೆನಪಿಲ್ಲ. ದಾವಾ ಸ್ವತ್ತುಗಳ ಚಕ್ಕುಬಂದಿ ನನಗೆ ಗೊತ್ತಾಗುವುದಿಲ್ಲ. ದಾವಾ ಸ್ವತ್ತುಗಳಲ್ಲಿ ನಾವು

ಯಾವತ್ತೂ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

4. ನನ್ನ ತಂದೆ 2ನೇ ಪ್ರತಿವಾದಿಗೆ ನೋಂದಾಯಿತ ಜಿ.ಪಿ.ಎ. ಬರೆದುಕೊಟ್ಟಿದ್ದು ಅದರಂತೆ 2ನೇ ಪ್ರತಿವಾದಿಯು ಕ್ರಯಪತ್ರವನ್ನು 1ನೇ ಪ್ರತಿವಾದಿಗೆ ಬರೆದುಕೊಟ್ಟಿರುವುದರಿಂದ ನಮಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆಯ ಜೀವಿತ ಕಾಲದಲ್ಲೇ ಕ್ರಯಪತ್ರ 1ನೇ ಪ್ರತಿವಾದಿಯ ಹೆಸರಿಗೆ ಆಗಿರುವುದರಿಂದ, ನೀವು ದಾವಾ ಸ್ವತ್ತುಗಳ ಮಾಲೀಕರೆಂದು ಘೋಷಿಸಲು ಬರುವುದಿಲ್ಲ ಎಂದರೆ ಸಾಕ್ಷಿಯು ನಾವು ದಾಖಲೆ ನೋಡಿಕೊಂಡಿರಲಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆಯ ಜೀವಿತ ಕಾಲದಲ್ಲೇ ದಾವಾ ಸ್ವತ್ತುಗಳು 1ನೇ ಪ್ರತಿವಾದಿಗೆ ಮಾರಾಟ ಆಗಿದ್ದು, ನಮಗೆ ಯಾವುದೇ ಹಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ನಮಗೂ ಅನ್ವರ್ ಖಾನ್‌ರವರಿಗೂ ಸಂಬಂಧ ಇಲ್ಲ, ನಾವು ಅನ್ವರ್ ಖಾನ್‌ರವರ ಮಕ್ಕಳು ಎಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಾವು ಅನ್ವರ್ ಖಾನ್‌ರವರ ಮಕ್ಕಳು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಮಗೂ, ದಾವಾ ಸ್ವತ್ತುಗಳಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.